**ಓ ಎಸ್ ನಂಃ 62/2019**
**ಪಿ ಡಬ್ಲ್ಯೂ ಃ 1**

**ದಿಃ 11.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಆರ್ ವಿ ಎಲ್ ವಕೀಲರಿಂದಃ-**

ನಾನು ಬಿ ಎ ಪಧವೀದರ. ನಾನು ಬಿ ಎ ಪಧವಿಯನ್ನು ಬೆಂಗಳೂರಿನ ಸರ್ವೋದಯ ಕಾಲೇಜ್ ನಲ್ಲಿ ಪೂರ್ಣಗೊಳಿಸಿರುತ್ತೇನೆ. ತಾವು ಹಣಕಾಸಿಗೆ ಸಂಬಂಧಪಟ್ಟ ಬಡ್ಡಿ ವ್ಯವಹಾರವನ್ನು ಮಾಡುತ್ತೀರಿ ಎಂದರೆ ಸರಿಯಲ್ಲ. ನಾನು ಕಂಪ್ಯೂಟರ್ ಉಪಕರಣಗಳನ್ನು ಮಾರಾಟ ಮಾಡುವ ಕೆಲಸ ಮಾಡುತ್ತಿದ್ದೇನೆ. ತಾವು ಈ ದಾವೆಯ ಪ್ರತಿವಾದಿಗೆ ಯಾವಾಗಲಾದರೂ ಸಾಲವನ್ನು ನೀಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿಃ 31.07.2018 ರಂದು ಈ ದಾವೆಯ ಪ್ರತಿವಾದಿಯಾದ ಎನ್ ಎಂ ಕುಮಾರ್ ರವರು ತಮಗೂ ಹಾಗೂ ರಾಜೇಶ್ ಕುಮಾರ್ ರವರಿಗೆ ನೋಂದಾಯಿತ ಒತ್ತೆ ಪತ್ರ (ಎಂ ಒ ಟಿ ಡಿ) ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ನಾನು ಬಡ್ಡಿ ವ್ಯವಹಾರವನ್ನು ಮಾಡುವುದಿಲ್ಲ ನನ್ನ ಸ್ನೇಹಿತರಾದ ರಾಜೇಶ್ ಕುಮಾರ್ ರವರು ಬಡ್ಡಿಯ ಹಣವನ್ನು ನೀಡಿರುತ್ತಾರೆ ಎಂದು ತಿಳಿಸಿದ್ದೆನು ಆಗ ರಾಜೇಶ್ ಕುಮಾರ್ ರವರು ನನ್ನನ್ನು ಕುರಿತು ತಾವು ನಾಮಕಾವಸ್ಥೆ ಎಂ ಒ ಟಿ ಡಿ ಪತ್ರಕ್ಕೆ ಸಹಿ ಹಾಕಿದರೆ ಹಣವನ್ನು ಸಾಲವಾಗಿ ಕೊಡುತ್ತೇನೆ ಎಂದು ತಿಳಿಸಿರುತ್ತಾರೆ. ಸದರಿ ವಿಚಾರವನ್ನು ದಿಃ 31.07.2018 ರ ಒತ್ತೆ ಪತ್ರದಲ್ಲಿ ನಮೂದು ಮಾಡಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಒತ್ತೆ ಪತ್ರದ ಮೂಲಕ ತಾವು ಹಾಗೂ ರಾಜೇಶ್ ಕುಮಾರ್ ರವರು ಈ ದಾವೆಯ ಪ್ರತಿವಾದಿಯಾದ ಎನ್ ಎಂ ಕುಮಾರ್ ರವರಿಗೆ ರೂ. 80,00,000/- ಹಣವನ್ನು ಸಾಲವಾಗಿ ನೀಡಿದ್ದೀರಿ ಎಂದರೆ ಸರಿಯಲ್ಲ. ಆದರೆ ರಾಜೇಶ್ ಕುಮಾರ್ ರವರು ಸಾಲವನ್ನು ನೀಡಿರುತ್ತಾರೆ. ಸದರಿ ಒತ್ತೆ ಪತ್ರದಲ್ಲಿ ರಾಜೇಶ್ ಕುಮಾರ್ ರವರೇ ಪ್ರತಿವಾದಿಗೆ ರೂ. 80,00,000/- ಹಣವನ್ನು ಸಾಲವಾಗಿ ಕೊಟ್ಟಿದ್ದಾರೆ ಎಂಬುದಾಗಿ ಒಕ್ಕಣೆ ಇದೆಯಾ ಎಂದರೆ ಸಾಕ್ಷಿಯು ಸದರಿ ದಾಖಲಾತಿಯ ಒಕ್ಕಣೆಯನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ರಾಜೇಶ್ ಕುಮಾರ್ ರವರು ತಮಗೆ ಯಾವ ರೀತಿ ಪರಿಚಯ ಇದ್ದಾರೆ ಎಂದರೆ ಸಾಕ್ಷಿಯು ನಾನು ಅವರ ಬಳಿ ಕಂಪ್ಯೂಟರ್ ಉಪಕರಣಗಳನ್ನು ಕೊಂಡುಕೊಳ್ಳುತ್ತಿದ್ದೆ ಆ ಕಾರಣ ಅವರು ನನಗೆ ಪರಿಚಯ ಇರುತ್ತಾರೆ. ತಾವು ರಾಜೇಶ್ ಕುಮಾರ್ ರವರಿಂದ ಕಂಪ್ಯೂಟರ್ ಉಪಕರಣಗಳನ್ನು ಖರೀದಿ ಮಾಡುತ್ತಿದ್ದೀರಿ ಎಂದು ತೋರಿಸಲು

ತಾವೇನಾದರೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ತಾವು ರಾಜೇಶ್ ಕುಮಾರ್ ರವರಿಂದ ಕಂಪ್ಯೂಟರ್ ಉಪಕರಣಗಳನ್ನು ಖರೀದಿ ಮಾಡುತ್ತಿದ್ದ ಬಗ್ಗೆ ತಮ್ಮ ಬಳಿ ಬಿಲ್ ಗಳು ಇವೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಬಿಲ್ ಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ರಾಜೇಶ್ ಕುಮಾರ್ ರವರು ಹಣದ ಲೇವಾ ದೇವಿ ವ್ಯವಹಾರವನ್ನು ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಅವರು ವ್ಯಾಪಾರದ ಜೊತೆಗೆ ಹಣದ ಲೇವಾ ದೇವಿ ವ್ಯವಹಾರವನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ರಾಜೇಶ್ ಕುಮಾರ್ ರವರು ನ್ಯಾಯಾಲಯಕ್ಕೆ ಕರೆಸಿ ತಮ್ಮ ಪರವಾಗಿ ಸಾಕ್ಷ್ಯ ಮಾಡಿಸಲು ತಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿಯು ನನಗೆ ತೊಂದರೆ ಇದೆ ಎಂದು ನುಡಿಯುತ್ತಾರೆ.

ಎನ್ ಎಂ ಕುಮಾರ್ ರವರು ದಾವಾ ಸ್ವತ್ತನ್ನು ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದು ಸದರಿ ಕ್ರಯ ಪತ್ರದ ಮೂಲ ಪ್ರತಿಯನ್ನು ಒತ್ತೆ ಪತ್ರದ ಪ್ರಕಾರ ರಾಜೇಶ್ ಕುಮಾರ್ ರವರ ವಶಕ್ಕೆ ನೀಡಲಾಗಿದೆ ಎಂದರೆ ಸರಿಯಲ್ಲ. ಈ ದಾವೆಯ ಷೆಡ್ಯೂಲ್ ನಲ್ಲಿ ನಮೂದಾಗಿರುವ ಸ್ವತ್ತು ದಿಃ 31.07.2018 ರ ಒತ್ತೆ ಪತ್ರದ ಷೆಡ್ಯೂಲ್ ನಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪಿ ಡಬ್ಲ್ಯೂ 2 ಮತ್ತು 3 ಎಂದು ವಿಚಾರಣೆಗೆ ಒಳಪಟ್ಟಿರುವ ಸಾಕ್ಷಿಗಳು ದಿಃ 31.07.2018 ರ ಒತ್ತೆ ಪತ್ರಕ್ಕೂ ಸಹ ಸಾಕ್ಷಿದಾರರಾಗಿ ಅವರ ಸಹಿಗಳನ್ನು ಹಾಕಿದ್ದಾರೆ ಎಂದರೆ ಸರಿ. ದಿಃ 31.07.2018 ರ ಒತ್ತೆ ಪತ್ರದ ಮುಲಕ ತಾವೇ ಪ್ರತಿವಾದಿಗೆ ರೂ. 80,00,000/- ಹಣವನ್ನು ಸಾಲವಾಗಿ ನೀಡಿದ್ದೀರಿ, ಆದರೆ ರಾಜೇಶ್ ಕುಮಾರ್ ರವರು ಸಾಲವನ್ನು ನೀಡದಿದ್ದರು ಸಹ ತಾವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಿಃ 12.07.2024 ರಂದು ದಿಃ 31.07.2018 ರ ಒತ್ತೆ ಪತ್ರವು ತಿರುವಳಿ (Discharge) ಆಗಿದೆ ಎಂದರೆ ಸರಿ. ಒತ್ತೆ ಪತ್ರದಲ್ಲಿ ಯಾರು ಪ್ರತಿವಾದಿಗೆ ಸಾಲವನ್ನು ಕೊಟ್ಟಿದ್ದರು ಎಂಬುದಾಗಿ ನಮೂದು ಮಾಡಿರುವುದಿಲ್ಲ, ಆದರೆ ದಿಃ 12.7.2024 ರ Discharge ಪತ್ರದಲ್ಲಿ ರಾಜೇಶ್ ಕುಮಾರ್ ರವರೇ ಪ್ರತಿವಾದಿಗೆ ಸಾಲವನ್ನು ಕೊಟ್ಟಿರುತ್ತಾರೆ ಮತ್ತು ಸದರಿ ಹಣವನ್ನು ರಾಜೇಶ್ ಕುಮಾರ್ ರವರಿಗೆ ಪ್ರತಿವಾದಿ ನೀಡಿದ್ದಾರೆ ಎಂಬ ವಿಚಾರವನ್ನು ಉದ್ದೇಶಪೂರ್ವಕವಾಗಿ ಬರೆಸಿ ಸದರಿ Discharge ಪತ್ರ ತಯಾರು ಮಾಡಲಾಗಿದೆ ಎಂದರೆ

**ಓ ಎಸ್ ನಂಃ 62/2019**
**ಪಿ ಡಬ್ಲ್ಯೂ ಃ 1**

ಸಾಕ್ಷಿಯು ಪ್ರತಿವಾದಿ ಸದರಿ ಪತ್ರದಲ್ಲಿರುವ ಒಕ್ಕಣೆಯನ್ನು ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಒತ್ತೆ ಪತ್ರವು ತಿರುವಳಿ ಆದ ಸಮಯದಲ್ಲಿ ಪ್ರತಿವಾದಿಯು ಒತ್ತೆ ಪತ್ರದ ಅನುಗುಣವಾಗಿ ತಮಗೆ ನೀಡಿರುವ ದಾವಾ ಸ್ವತ್ತಿನ ಕ್ರಯ ಪತ್ರದ ಮೂಲ ಪ್ರತಿಯನ್ನು ಪ್ರತಿವಾದಿಗೆ ತಾವು ಹಿಂತಿರುಸಿದ್ದೀರ ಎಂದರೆ ಸಾಕ್ಷಿಯು ಸದರಿ ಮೂಲ ಕ್ರಯ ಪತ್ರವು ನನ್ನ ಬಳಿ ಇದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**